ಒಳ್ಳೆಯ ಸಲಹೆ, ನಾವು ಇದನ್ನು ಸರ್ಕಾರಕ್ಕೆ ತಿಳಿಸಿ, ಮೂಡಾಗೆ ಕೊಡುವುದಕ್ಕೆ, ಇಲಾಖೆಯ ನಿಯಮಾನುಸಾರ ಕೊಡುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ.

ಶ್ರೀ ಇ. ಮಾರುತಿರಾವ್ ಪವಾರ್ : ಸಭಾಧ್ಯಕ್ಷರೆ,.....

ಅಧ್ಯಕ್ಷರು : ಚರ್ಚೆಗೆ ಅವಕಾಶವಿಲ್ಲ.

ಈ) ಸಿಂಧನೂರು ತಾಲ್ಲೂಕಿನಲ್ಲಿ ಕೆರೆ ನಿರ್ಮಿಸಲು ಭೂಮಿ ಖರೀದಿ :

ಶ್ರೀ ಕೆ. ವಿರೂಪಾಕ್ಷಪ್ಪ (ಸಿಂಧನೂರು) : ಸನ್ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರವಾದಂತಹ ಸಿಂಧನೂರು ತಾಲ್ಲೂಕಿನಲ್ಲಿ ಸುಮಾರು 60 ರಿಂದ 70 ಪರ್ಸೆಂಟ್ ಹಳ್ಳಿಗಳಲ್ಲಿ ಅಂತರ್‌ಜಲದಲ್ಲಿ ಸಿಹಿ ನೀರು ಸಿಗುತ್ತಿಲ್ಲ. ಆದರೆ ಅನಿವಾರ್ಯವಾಗಿ ನಾವು ಕೆರೆ ಮಾಡಿ, ಕುಡಿಯುವ ನೀರನ್ನು ಪೂರೈಸಬೇಕು ಎಂದರೂ ಸಹ ತಾವು ಬೇರೆ ಬೇರೆ ಯೋಜನೆಗಳಲ್ಲಿ ಕೆರೆ ಮಾಡುವುದಕ್ಕೆ ಹಣ ಒದಗಿಸಿದರೂ ಸಹ ಆ ಕೆರೆ ಮಾಡಬೇಕಾದಂತಹ ಭೂಮಿ ಖರೀದಿ ಮಾಡುವುದಕ್ಕೆ ಯಾವುದೇ ಯೋಜನೆಯಲ್ಲಿ ಅವಕಾಶ ಇರುವುದಿಲ್ಲ. ಆ ಕಾರಣದಿಂದ ಇವತ್ತು ಕೆರೆ ಮಾಡುವುದಕ್ಕೆ ಬೇಕಾಗಿರುವಂತಹ ಭೂಮಿ ಖರೀದಿ ಮಾಡುವುದಕ್ಕೆ ಸರ್ಕಾರ ಹಣದ ಅವಶ್ಯಕತೆಯನ್ನು ಒದಗಿಸುವಂತಹ ವ್ಯವಸ್ಥೆ ಮಾಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಸಚಿವರು): ಮಾನ್ಯ ಸಭಾಧ್ಯಕ್ಷರೆ, ಇದು ಜಿಲ್ಲಾಪಂಚಾಯತ್ ವತಿಯಿಂದ ಮಾಡಬೇಕಾಗಿರುವಂತಹ ಕೆಲಸ. ನೀರಾವರಿಯನ್ನು ಕೊಡಬೇಕಾಗಿರುವಂತಹುದು, ಕುಡಿಯುವ ನೀರಿನ ಸೌಲಭ್ಯವನ್ನು ಒದಗಿಸ ಬೇಕಾಗಿರುವಂತಹ ಜಿಲ್ಲಾಪಂಚಾಯತ್ ವತಿಯಿಂದ ಮಾಡಬೇಕಾಗಿರುವಂಥ ಕೆಲಸ. ಕೆರೆಯನ್ನು ನಿರ್ಮಾಣ ಮಾಡುವುದಕ್ಕೆ ಜಮೀನನ್ನು ಖರೀದಿ ಮಾಡಬೇಕಾಗುತ್ತದೆ. ಅದಕ್ಕೋಸ್ಕರ ಹಣವನ್ನು ಒದಗಿಸಬೇಕೆಂಬ ವಿಚಾರವನ್ನು ಪ್ರಸ್ತಾಪ ಮಾಡಿದ್ದೀರಿ. ಸಭಾಧ್ಯಕ್ಷರೆ, ಈ ವಿಷಯವನ್ನು ಇಲಾಖೆಯ ಮುಖಾಂತರ ಜಿಲ್ಲಾ ಪಂಚಾಯತ್‌ಗೆ ತಿಳಿಸಿ ಈ ಕಾರ್ಯಕ್ರಮವನ್ನು ಮಾಡುವುದಕ್ಕೆ ಸರ್ಕಾರ ಪ್ರಯತ್ನ ಪಡುತ್ತದೆ ಎಂಬ ವಿಚಾರವನ್ನು ಹೇಳಬಯಸುತ್ತೇನೆ.

ಉಲ್ಲಾಳ ಕ್ಷೇತ್ರದಲ್ಲಿ ಕರ್ನಾಟಕ ರಾಜ್ಯ ಸರ್ಕಾರಿ ವಾಹನ ಚಾಲಕರ ಸದಸ್ಯರಿಗೆ ನಿವೇಶನ ನೀಡುವ ಬಗ್ಗೆ

ಶ್ರೀ ಕೆ. ಜಯರಾಂ ಶೆಟ್ಟಿ (ಉಲ್ಲಾಳ) : ಸನ್ಮಾನ್ಯ ಅಧ್ಯಕ್ಷರೆ, ನಮ್ಮ ಕ್ಷೇತ್ರದ ಸೋಮೇಶ್ವರ ಗ್ರಾಮದಲ್ಲಿ ಸರ್ವೆ ನಂ 221, ಮತ್ತು 222 ಎ, ಸುಮಾರು ಮೂರು ಎಕರೆ, 70 ಎಕರೆ ಸೆಂಟ್ಸ್‌ನಲ್ಲಿ ಕರ್ನಾಟಕ ರಾಜ್ಯ ಸರ್ಕಾರದ ವಾಹನ ಚಾಲಕರ ಸಂಘ, ದಕ್ಷಿಣ ಕನ್ನಡ ಜಿಲ್ಲೆ, ಇವರು ಮನೆ ನಿವೇಶನಕ್ಕೆ ಅರ್ಜಿ ಸಲ್ಲಿಸಿದ್ದರು. ಇದಕ್ಕೆ ದಕ್ಷಿಣ ಕನ್ನಡ ಜಿಲ್ಲಾಧಿಕಾರಿಗಳು ಮತ್ತು ಮೈಸೂರು ವಿಭಾಗ ಅಧಿಕಾರಿಗಳು ಈ ಅರ್ಜಿಯನ್ನು ಪುರಸ್ಕರಿಸಿ, ರಾಜ್ಯ ಸರ್ಕಾರಕ್ಕೆ ನಿವೇಶನ ಕೊಡುವುದಕ್ಕೆ ಶಿಫಾರಸ್ಸು ಮಾಡಿ ಕಳುಹಿಸಿದ್ದರು. ಈಗಾಗಲೇ ಈ ಅರ್ಜಿಯನ್ನು ಕಳುಹಿಸಿ ಸುಮಾರು 2-3 ವರ್ಷ ಕಳೆದಿದೆ. ಕಳೆದ ವರ್ಷ ಊರಿನ ಮತ್ತು ಆಸುಪಾಸಿನ ಜನ ಎಲ್ಲಾ ಬಂದು ಈ ಜಾಗವನ್ನು ಎನ್‌ಕ್ರೋಚ್ ಮಾಡಿದ್ದರು. ಆದರೆ ಜಿಲ್ಲಾಧಿಕಾರಿಗಳ ಪ್ರಯತ್ನದಿಂದ ಅದನ್ನು ತೆರವುಗೊಳಿಸಿ ಅಲ್ಲಿ ಫೆನ್ಸಿಂಗ್ ಮಾಡಲಾಗಿತ್ತು. ಆದರೆ ಇದುವರೆಗೆ ರಾಜ್ಯ ಸರ್ಕಾರದ ಈ ನೌಕರರಿಗೆ ಮನೆ ನಿವೇಶನ ಕೊಡುವ ಬಗ್ಗೆ ಯಾವುದೇ ರೀತಿಯಾದಂತಹ ವ್ಯವಸ್ಥೆ ಮಾಡಿಲ್ಲ. ರಾಜ್ಯ

ಸರ್ಕಾರದ ಇಲಾಖೆಯಲ್ಲಿ ಆರ್ ಡಿ ಐ 57, ಎಲ್ ಜಿ ಐ 97ರ ಪ್ರಕಾರ ಇಲ್ಲಿ ಕಡತ ಬಾಕಿ ಇದೆ. ಆದಕಾರಣ ದಯವಿಟ್ಟು ಈ ನೌಕರರಿಗೆ ತಕ್ಷಣ ನಿವೇಶನ ಕೊಡುವ ವ್ಯವಸ್ಥೆ ಮಾಡಬೇಕೆಂದು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಎಂ.ಸಿ. ನಾಣಯ್ಯ : ಸನ್ಮಾನ್ಯ ಸಭಾಧ್ಯಕ್ಷರೆ, ಇಲ್ಲಿರುವಂತಹ ವಿಚಾರ ಸರ್ಕಾರ ವಾಹನ ಚಾಲಕರ ಸಂಘದ ಸದಸ್ಯರಿಗೆ ನಿವೇಶನಗಳಿಗೆ ಸಂಬಂಧಪಟ್ಟಿರುವಂಥದ್ದು, ವಿಭಾಗಾಧಿಕಾರಿಗಳು ಸಹ ಇದನ್ನು ಶಿಫಾರಸ್ಸು ಮಾಡಿ ಸರ್ಕಾರಕ್ಕೆ ಕಳುಹಿಸಿದ್ದಾರೆ. ಇದು ರೆವಿನ್ಯೂ ಇಲಾಖೆಯಲ್ಲಿ ಇದೆ, ಇದಕ್ಕೆ ಇನ್ನು ಮಂಜೂರಾತಿಯನ್ನು ಕೊಟ್ಟಿಲ್ಲ ಎನ್ನುವ ವಿಚಾರ ತಿಳಿದು ಬಂದಿದೆ, ಇದರ ಬಗ್ಗೆ ಸರ್ಕಾರ ಗಮನ ಹರಿಸಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತದೆ.

ಊ) ಹುಬ್ಬಳ್ಳಿ - ಧಾರವಾಡ ಮಹಾನಗರದಲ್ಲಿ ಕುಡಿಯುವ ನೀರಿನ ಸಮಸ್ಯೆ

ಶ್ರೀ ಜಗದೀಶ್ ಶೆಟ್ಟರ್ : ಸನ್ಮಾನ್ಯ ಸಭಾಧ್ಯಕ್ಷರೆ, ಹುಬ್ಬಳ್ಳಿ - ಧಾರವಾಡ ಮಹಾ ನಗರದಲ್ಲಿ ಕುಡಿಯುವ ನೀರಿನ ಹಾಹಾಕಾರ ತಲೆದೋರಿದೆ. ನೀರಸಾಗರ ಮತ್ತು ಮಲಪ್ರಭಾ ಜಲಾಶಯದಿಂದ 7 ಎಂಜಿಡಿ ಮತ್ತು 11 ಎಂಜಿಡಿ ನೀರು ಪೂರೈಕೆಯಾಗುತ್ತಿದ್ದರೂ ಸಹ ಇವತ್ತಿನ ದಿವಸ ವಿತರಣಾ ವ್ಯವಸ್ಥೆಯಲ್ಲಿ ನೀರನ್ನು ಸರಿಯಾಗಿ ವಿತರಣೆ ಮಾಡದೇ ಇರುವುದರಿಂದ ಮತ್ತು ವಿದ್ಯುಚ್ಛಕ್ತಿಯ ಅಭಾವದಿಂದ , ಹಾಗೂ ಕಡಿತದಿಂದ ಅಲ್ಲಲ್ಲಿ ಕೊಳವೆಯಿಂದ ನೀರು ಸೋರಿ ಹೋಗುತ್ತಿರುವುದರಿಂದ ಇವತ್ತಿನ ದಿವಸ ಈ ನೀರಿನ ತೊಂದರೆ ಉಂಟಾಗಿದೆ. ಆದಕಾರಣ ತಾವು ದಯವಿಟ್ಟು ಇದರ ಬಗ್ಗೆ ಗಮನ ಹರಿಸಬೇಕು. ಏಕೆಂದರೆ ಇವತ್ತಿನ ದಿವಸ ರಸ್ತಾರೋಕೋ ನಗರದಲ್ಲಿ ನಡೆಯುತ್ತಿದೆ. ಮತ್ತೊಂದು ವಿಷಯವೇನೆಂದರೆ, ಈಗಿನ ವ್ಯವಸ್ಥೆಗೆ ಒಂದನೇ ಯೋಜನೆ ಮತ್ತು ಎರಡನೆ ಯೋಜನೆ ಮುಗಿದಿದೆ, ಮೂರನೆ ಹಂತದ ಯೋಜನೆಯನ್ನು 120 ಕೋಟಿ ರೂ.ಗಳ ವೆಚ್ಚದಲ್ಲಿ ತೀವ್ರಗತಿಯಿಂದ ಸರ್ಕಾರ ತೆಗೆದುಕೊಂಡರೆ ಖಾಯಂ ಆಗಿ ನೀರಿನ ಆಹಾಕಾರವನ್ನು ಪರಿಹರಿಸಬಹುದು. ಆದಕಾರಣ ಸರ್ಕಾರ ಇದರ ಬಗ್ಗೆ ಗಮನ ಹರಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ.ಸಿ. ನಾಣಯ್ಯ : ಸರ್ಕಾರ ಈಗಾಗಲೇ ಇದರ ಬಗ್ಗೆ ಕ್ರಮ ಕೈಗೊಂಡಿರುವುದು. ತಮ್ಮ ಗಮನಕ್ಕೆ ಬಂದಿರಬಹುದು. ಮೂರನೆ ಯೋಜನೆಯನ್ನು ತಾವು ತೆಗೆದುಕೊಳ್ಳಬೇಕಾಗಿದೆ. ಇದಕ್ಕೆ ತಕ್ಕಂತಹ ಹಣವನ್ನು ತಾವು ಒದಗಿಸಬೇಕಾಗುತ್ತದೆ. ಆದಕಾರಣ ಇದರ ಬಗ್ಗೆ ತ್ವರಿತ ಗತಿಯಲ್ಲಿ ಕೆಲಸ ಮಾಡಬೇಕಾಗುತ್ತದೆ ಮಾಡೋಣ. ಆದರೆ ನಾವು ಇಷ್ಟೇ ಅವಧಿಯಲ್ಲಿ ಮಾಡುತ್ತೇವೆ ಎಂದು ಹೇಳುವುದಿಲ್ಲ, ಏಕೆಂದರೆ, ಹಣದ ಸಂಪನ್ಮೂಲವನ್ನು ನೋಡಿಕೊಂಡು ಕೆಲಸ ಮಾಡಬೇಕು, ಆ ಹಿನ್ನೆಲೆಯನ್ನು ನೋಡಿಕೊಂಡು ಕ್ರಮ ಕೈಗೊಳ್ಳುತ್ತೇವೆ.

ಎ) ಮೈಸೂರಿನ ಮೆಟ್ರೋಪೋಲ್ ಹೋಟೆಲ್‌ನ್ನು ಖಾಸಗಿಯವರಿಗೆ ನೀಡದೇ ಇರಲು ಕ್ರಮ ಕೈಗೊಳ್ಳುವ ಬಗ್ಗೆ

ಶ್ರೀ ಹೆಚ್. ಎಸ್. ಶಂಕರಲಿಂಗೇಗೌಡ : ಸನ್ಮಾನ್ಯ ಅಧ್ಯಕ್ಷರೆ, ಮೈಸೂರಿನ ಮೆಟ್ರೋಪೋಲ್ ಹೋಟೆಲ್ ಇಂದು ವಿವಾದಾತ್ಮಕ ಸ್ಥಿತಿಯಲ್ಲಿ ಇದೆ. ಮೊದಲು ಸರ್ಕಾರ ಈ ಹೋಟೆಲನ್ನು ಖಾಸಗಿಯವರಿಗೆ ಕೊಟ್ಟು ಲಕ್ಷಾಂತರ ರೂಪಾಯಿ ಕೈಸುಟ್ಟುಕೊಂಡಿದೆ. ಇಂತಹ ಪರಿಸ್ಥಿತಿಯಲ್ಲಿ ಪುನ: ಖಾಸಗಿ ಅವರಿಗೆ ಕೊಡುವುದಕ್ಕೆ ಟೆಂಡರ್ ಮೂಲಕ ಆಹ್ವಾನಿಸಲಾಗಿದೆ ಎಂದು ಕನ್ನಡ ಪ್ರಭ